ದಿನಾಂಕಃ 24.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-

28. ಪೋಲಿಸರು ಅಮಾನತುಪಡಿಸಿಕೊಂಡ ಸಿಡಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.35 ಎಂದು ಗುರುತಿಸಲಾಯಿತು. ನಿಪಿ.35 ರ ಸಿಡಿಯನ್ನು ತೆರೆದ ನ್ಯಾಯಾಲಯದಲ್ಲಿ ಪ್ರದರ್ಶಿಸಲಾಯಿತು. ಸಾಕ್ಷಿಯು ನಿಪಿ.35 ರಲ್ಲಿ 1 ನೇ ಆರೋಪಿ ಹಾಗೂ ಮೃತ ಪ್ರಕಾಶನ ಇರುವಿಕೆಯನ್ನು ಗುರುತಿಸಿರುತ್ತಾರೆ. (ನಿಪಿ.35 ಡಿವಿಡಿಯನ್ನು ಚಿಕ್ಕಮಗಳೂರು ಎಸ್.ಪಿ. ಕಚೇರಿಯಿಂದ ಪೂರೈಸಲಾದ ಲ್ಯಾಪ್ ಟಾಪ್ ಮೂಲಕ ಶ್ರೀ ಕಾಂತರಾಜು, ಮುಖ್ಯಪೇದೆ/ಸಿಸ್ಟಂ ಅಡ್ ವೈಸರ್, ಎಸ್.ಪಿ. ಕಚೇರಿ, ಇವರ ಮೂಲಕ ತೆರೆದ ನ್ಯಾಯಾಲಯದಲ್ಲಿ ಪ್ರದರ್ಶಿಸಲಾಯಿತು).

ಪಾಟೀ ಸವಾಲುಃ ಶ್ರೀ.ಎನ್.ಡಿ., ವಕೀಲರಿಂದ ಆರೋಪಿತರ ಪರವಾಗಿ

29. ನಮ್ಮ ಊರಿನಲ್ಲಿ 300-400 ಮನೆಗಳಿವೆ. ಎಲ್ಲಾ ಸಮಾಜದ ಜನರು ನಮ್ಮೂರಿನಲ್ಲಿ ವಾಸವಿದ್ದಾರೆ. ನಾನೊಬ್ಬ ಕೃಷಿಕ. ನಾನು ಕೃಷಿಕನಲ್ಲ ಎಂದರೆ ಸರಿಯಲ್ಲ. ನಾನು ಮೀಟರ್ ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ.

30. ನಾನು ಮೃತ ಪ್ರಕಾಶನಿಗೆ ಮೀಟರ್ ಬಡ್ಡಿ ಆಧಾರದ ಮೇಲೆ ಸಾಲ ನೀಡಿದ್ದೇನೆ ಎಂದರೆ ಸರಿಯಲ್ಲ. ಮೃತ ಪ್ರಕಾಶ ಕಡೂರಿನ ಆಟೋ ಸ್ಟಾಂಡಿನ ಹುಡುಗರ ಬಳಿ ಸಾಲ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಆತ ಸಾಲದ ಸುಳಿಯಲ್ಲಿ ಸಿಕ್ಕಿಕೊಂಡಿದ್ದ ಎಂದರೆ ಸರಿಯಲ್ಲ. ಆಟೋ ಸ್ಟಾಂಡಿನ ಹುಡುಗರ ಜೊತೆ ಸಾಲ ಮರುಪಾವತಿ ಮಾಡದ ಕಾರಣಕ್ಕೆ ಮೃತ ಪ್ರಕಾಶ ದ್ವೇಷಕಟ್ಟಿಕೊಂಡಿದ್ದ ಎಂದರೆ ಸರಿಯಲ್ಲ.

31. ಪ್ರಶಾಂತ ಎಂಬುವನು ನಮ್ಮೂರಿನವನು ಆದ ಕಾರಣ ನನ್ನ ಸ್ನೇಹಿತನಾಗಿದ್ದ. ಬಡ್ಡಿ ಮರುಪಾವತಿಸಲು ಎರಡು ದಿನಗಳ

ವಿಳಂಬವಾದ ಕಾರಣ ನಾನು ಸದರಿ ಪ್ರಶಾಂತನೊಂದಿಗೆ ದ್ವೇಷ ಕಟ್ಟಿಕೊಂಡಿದ್ದೇನ ಎಂದರೆ ಸರಿಯಲ್ಲ. ಈ ಸಂಬಂಧ ಕಡೂರು ಠಾಣೆಯಲ್ಲಿ ನನ್ನ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ನಿಜ. ನಾನು ಬಡ್ಡಿ ವ್ಯವಹಾರ ಮಾಡುತ್ತಿದ್ದರೂ ಕೂಡ ಮಾಡುತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ನಾನು ಗ್ರಾಮ ಪಂಚಾಯತಿ ಸದಸ್ಯನಲ್ಲ. ನಮ್ಮೂರಿನಿಂದ ಕಡೂರು ಪೋಲೀಸ್ ಠಾಣೆ ಎರಡು ಕಿಮಿ ದೂರ ಇದೆ. ನಮ್ಮೂರಿನಿಂದ ಕಡೂರು ಠಾಣೆ ಮಧ್ಯದಲ್ಲಿ ಶ್ರೀರಾಂಪುರ ಎನ್ನುವ ಊರು ಇದ್ದು ಅಲ್ಲಿ ಸುಮಾರು 80 ಮನೆಗಳಿವೆ. ಅಲ್ಲದೆ ನಮ್ಮೂರು ಹಾಗೂ ಕಡೂರು ಠಾಣೆ ಮಧ್ಯ ಲಂಬಾಣಿ ತಾಂಡ್ಯ, ಅರವಿನಹಳ್ಳಿ ಗೇಟು, ಮಾರ್ಕೆಟು ಇದೆ. ಅಲ್ಲೆಲ್ಲ ಜನರ ಓಡಾಟ ಇರುತ್ತದೆ. ನಾನೊಬ್ಬ ಕಾಂಗ್ರೆಸ್ ಬೆಂಬಲಿಗ. ಆರೋಪಿತರು ಜೆಡಿಎಸ್ ಬೆಂಬಲಿಗರು ಎಂದರೆ ಗೊತ್ತಿಲ್ಲ.

33. ನಿಪಿ.35ರ ಸಿಸಿ ಟಿವಿ ಪ್ಯೂಟೇಜಿನಲ್ಲಿ ಕತ್ತಲೆಯ ಸಮಯ ದಾಖಲಾಗಿದೆ ಎಂದರೆ ನಿಜ. ನಿಪಿ.35ರ ಸಿಸಿ ಟಿವಿ ಪ್ಯೂಟೇಜಿನಲ್ಲಿ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ.35ರ ಸಿಸಿ ಟಿವಿ ಪ್ಯೂಟೇಜಿನಲ್ಲಿ ಕಂಡುಬರುವ ವ್ಯಕ್ತಿಗಳು ಈ ಪ್ರಕರಣದ 1 ನೇ ಆರೋಪಿ ಮತ್ತು ಮೃತ ಪ್ರಕಾಶ ಅಲ್ಲ ಎಂದರೆ ಸರಿಯಲ್ಲ. ಮೃತ ಪ್ರಕಾಶ ನನ್ನ ಸಂಬಂಧಿ.

34. ಮೃತ ಪ್ರಕಾಶ ನಮ್ಮ ಸಂಬಂಧಿಯಾದ ಕಾರಣ ಆತನ ಕುಟುಂಬದವರಿಗೆ ಸಹಾಯ ಮಾಡಲು ನಿಪಿ.35ರಲ್ಲಿ ಮೃತ ಪ್ರಕಾಶ ಹಾಗೂ 1 ನೇ ಆರೋಪಿಯನ್ನು ಗುರುತಿಸುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಕೇಳಿದಾಗ ಪೆಟ್ರೋಲ್ ಬಂಕ್ ಮಾಲೀಕರು ನನ್ನ ಸಮಕ್ಷಮ ಡಿವಿಡಿ ಹಾಜರು ಮಾಡಿದ್ದರು. ಆ ಸಮಯದಲ್ಲಿ ಪೋಲೀಸರು, ನಾನು ಹಾಗೂ ನನ್ನ

ಸಂಬಂಧಿಕರು ಹಾಜರಿದ್ದರು. ಈ ಪ್ರಕರಣದ ಎಲ್ಲಾ ಸಾಕ್ಷಿದಾರರು ನಮ್ಮ ಸಂಬಂಧಿಕರಲ್ಲ. ಡಿವಿಡಿ ಹೊರತುಪಡಿಸಿ ಪೆಟ್ರೋಲ್ ಬಂಕ್ ಮಾಲೀಕರು ಬೇರೆ ಏನನ್ನು ಹಾಜರುಪಡಿಸಿರಲಿಲ್ಲ. ನನ್ನ ಸಮಕ್ಷಮ ಪೆಟ್ರೋಲ್ ಬಂಕ್ ಮಾಲೀಕರು ಡಿವಿಡಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಿಸಿ ಟಿವಿ ಪ್ಯೂಟೇಜು ನಿಪಿ.35 ರಲ್ಲಿ ಸುಮಾರು ಅರ್ಧ ಗಂಟೆ ಸಮಯ ದಾಖಲಾದ ದೃಶ್ಯ ಇದೆ ಎಂದರೆ ಸರಿಯಲ್ಲ. ನಿಪಿ.35 ರ ಸಿಸಿ ಟಿವಿ ಪ್ಯೂಟೇಜಿನ ಸಂಪೂರ್ಣ ದೃಶ್ಯಾವಳಿಯಲ್ಲಿ ಸ್ಪಷ್ಟತೆ ಇಲ್ಲ ಎಂದರೆ ಸರಿಯಲ್ಲ.

35. ನಿಪಿ.35 ರಲ್ಲಿ ಒಂದು ದ್ವಿಚಕ್ರ ವಾಹನ, ಒಂದು ನಾಲ್ಕು ಚಕ್ರದ ವಾಹನ ಬಂದು ಇಂಧನ ತುಂಬಿಸಿಕೊಳ್ಳುವುದು ಕಾಣುತ್ತದೆ ಎಂದರೆ ನಿಜ. ಅದರಲ್ಲಿ ವ್ಯಕ್ತಿಗಳ ಗುರುತಿಸುವಿಕೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಹೊರತುಪಡಿಸಿ ನಾನು ಬೇರೆ ಯಾವುದೇ ಪ್ರಕರಣದಲ್ಲಿ ಕಡೂರು ಪೋಲೀಸರ ಪರ ಸಾಕ್ಷಿದಾರನಾಗಿಲ್ಲ.

36. ದಿಃ 20.07.2021 ರಂದು ನಾನು ಕಡೂರು ಠಾಣೆಗೆ ಹೋದಾಗ ಬೆಳಿಗ್ಗೆ 8.30 ಗಂಟೆಯಾಗಿತ್ತು. ಮೃತ ಪ್ರಕಾಶನ ಕೊಲೆ ಮಾಡಿದ ಆರೋಪಿತರನ್ನು ಪೋಲೀಸರು ಬಂಧಿಸಿದ್ದಾರೆ ಎಂದು ನಮ್ಮ ಊರಿನ ಹುಡುಗ ತಿಳಿಸಿದ್ದನು. ಮೃತ ಪ್ರಕಾಶ ನಮ್ಮ ಸಂಬಂಧಿಯಾದ ಕಾರಣ ಆರೋಪಿತರಿಗೆ ಹೇಗಾದರೂ ಶಿಕ್ಷೆ ಕೊಡಿಸಲು ನಾವು ಸಂಬಂಧಿಕರೆಲ್ಲರೂ ದುರುದ್ದೇಶದಿಂದ ಸಾಕ್ಷಿದಾರರಾಗಿದ್ದೇವೆ ಎಂದರೆ ಸರಿಯಲ್ಲ. ಪೋಲೀಸರು 1 ನೇ ಆರೋಪಿ ಬದಲಿ ಟೀ ಶರಟು ನೀಡಿದ್ದರು.

37. ಮು.ಮಾ.10 ರಂತಹ ಮೊಬೈಲು ಎಲ್ಲಾ ಕಡೆ ಸಿಗುತ್ತದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದ ಮು.ಮಾ.10 ನ್ನು ಪೋಲೀಸರು ನಮ್ಮ ಮುಂದೆ ಜಪ್ತು ಮಾಡಿದ್ದಾರೆ ಎನ್ನುತ್ತಾರೆ. ನಾವು ಬೆಳಿಗ್ಗೆ 8.30 ಕ್ಕೆ ಠಾಣೆಗೆ ಹೋದಾಗ ಮು.ಮಾ.10 ಮೊಬೈಲು ಠಾಣೆಯಲ್ಲಿತ್ತು.

ಮು.ಮಾ.10 ಮೊಬೈಲು 1 ನೇ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳುವಂತೆ 2 ನೇ ಆರೋಪಿ ಜೀಪಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಜೀಪಿನಲ್ಲಿಯೇ ಕುಳಿತಿದ್ದ ಎಂದು ಮಹಜರಿನಲ್ಲಿ ನಮೂದಿಸಿರಬಹುದು. ಆರೋಪಿತರು ಎಂದೂ ನಮ್ಮ ಜೊತೆ ಜೀಪಿನಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

38. ನಿಪಿ.17, 18 ಮತ್ತು 19 ರ ಭಾವಚಿತ್ರಗಳಲ್ಲಿ ಆರೋಪಿತರ ಇರುವಿಕೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.17 ರಿಂದ 19 ರ ಭಾವಚಿತ್ರಗಳಲ್ಲಿ 2 ನೇ ಆರೋಪಿ ಕಂಡುಬರುವುದಿಲ್ಲ ಎಂದರೆ ನಿಜ, ಸಾಕ್ಷಿಯು ಮುಂದುವರೆದು 2 ನೇ ಆರೋಪಿ ಜೀಪಿನಲ್ಲಿಯೇ ಕುಳಿತಿದ್ದರು ಎನ್ನುತ್ತಾರೆ. ನಿಪಿ.20 ರ ದಾಖಲೆಯಲ್ಲಿ ಪೋಲೀಸರು ಏನು ಬರೆದಿದ್ದಾರೆ ಎಂದು ಹೇಳಲಾಗುವುದಿಲ್ಲ.

39. ಕಡೂರು ಒಂದು ಪಟ್ಟಣ ಎಂದರೆ ನಿಜ. ಕಡೂರು ಪಟ್ಟಣದ ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ನಿಜ. ಖಾಸಗಿ ಅಂಗಡಿಗಳ ಮಾಲೀಕರು ಕೂಡ ಸಿಸಿ ಟಿವಿ ಅಳವಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮುಂದುವರೆದು ಎಲ್ಲಾ ಅಂಗಡಿಗಳಲ್ಲೂ ಸಿಸಿ ಟಿವಿ ಅಳವಡಿಸುವುದಿಲ್ಲ ಎನುತ್ತಾರೆ. ಕಡೂರಿನ ಶ್ರೀ ಮಾರ್ಟ ಗೆ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ನಿಜ. ಶ್ರೀ ಮಾರ್ಟಿನ ಎದುರುಗಡೆ ಬೀದಿ ದೀಪ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

40. ನಾನು ಹೇಳುವ ವಿಚಾರಕ್ಕೂ ನಿಪಿ.22 ರ ನಕ್ಷೆಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಿಕ್ಕಮಗಳೂರು ಲಾರಿ ಸ್ಟಾಂಡಿನಲ್ಲಿ ಆಟೋ ನಿಲ್ಲಿಸಲು ಅವಕಾಶ ನೀಡುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕಮಗಳೂರು ಲಾರಿ ಸ್ಟಾಂಡು ಒಂದು ಜನದಟ್ಟಣೆ ಇರುವ ಜಾಗ ಎಂದರೆ ನಿಜ. ನಿಪಿ.23 ರಲ್ಲಿ ಜೀಪು ಮತ್ತು 2 ನೇ ಆರೋಪಿ ಕಂಡುಬರುತ್ತಿಲ್ಲ ಎಂದರೆ ನಿಜ. ನಿಪಿ.23 ರ ಭಾವಚಿತ್ರವನ್ನು

ಮೊಬೈಲಿನಲ್ಲಿ ಸಂಗ್ರಹಿಸಿದ್ದರು. ನಿಪಿ.25 ರ ಭಾವಚಿತ್ರದಲ್ಲಿ ಸಮಯ ದಿನಾಂಕ ನಮೂದಿಲ್ಲ ಎಂದರೆ ನಿಜ.

41. ಬೆಂಗಳೂರು ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚು ವಾಹನಗಳು ಒಡಾಡುತ್ತವೆ ಎಂದರೆ ನಿಜ. ಹೌಸಿಂಗ್ ಬೋರ್ಡ ಲೇಔಟ್ ನಲ್ಲಿ ಜನ ಮನೆಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ. ಅಡಿಕೆ ಮತ್ತು ತೆಂಗಿನ ತೋಟಗಳು ಅಲ್ಲಿ ಇದ್ದಿರಬಹುದು. ಮಾರುತಿಸೈಕಲ್ ಶಾಪಿನ ಓನರ್ ಸದರಿ ತೋಟದಲ್ಲಿ ವಾಸವಿದ್ದಾರೆ ಎಂದರೆ ಇರಬಹುದು.

42. ಪೋಲೀಸರು ಹಗ್ಗವನ್ನು ಅಮಾನತುಪಡಿಸಿಕೊಳ್ಳುವ ಸಮಯದಲ್ಲಿ ಬೆರಳಚ್ಚು ತಜ್ಞರ ತಂಡ ಇರಲಿಲ್ಲ. ಚರಂಡಿಯಲ್ಲಿ ಕಸಕಡ್ಡಿ ಇರುತ್ತದೆ ಎಂದರೆ ನಿಜ. ನಾನು ಹೇಳುವಂತೆ ಪೋಲೀಸರು ಯಾವುದೇ ಹಗ್ಗವನ್ನು ನಾನು ಹೇಳುವ ಸ್ಥಳದಿಂದ ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.30 ರ ಭಾವಚಿತ್ರದಲ್ಲಿ ರಕ್ತದ ಕುರುಹುಗಳು ಇರುವುದಿಲ್ಲ. ನಿಪಿ.7 ರ ಭಾವಚಿತ್ರ ಚಿಕ್ಕಮಗಳೂರು ಲಾರಿ ಸ್ಟಾಂಡಿನ ಭಾವಚಿತ್ರ ಅಲ್ಲ ಎಂದರೆ ಸರಿಯಲ್ಲ. ಯಾವುದೋ ಲಾರಿಯನ್ನು ತಂದು ನಿಲ್ಲಿಸಿ ನಿಪಿ.7 ರ ಭಾವಚಿತ್ರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ.34 ರ ಭಾವಚಿತ್ರವನ್ನು ಬೇರೆ ಎಲ್ಲಿಯೋ ತೆಗೆದು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

43. ಆರೋಪಿತರು ಪೊಲೀಸರಿಗೆ ದಿನಾಂಕ 14.07.2021 ರಂದು ಪ್ರಕಾಶನ ಆಟೋವನ್ನು ಕಡೂರಿನ ಬಸವೇಶ್ವರ ವೃತ್ತದಲ್ಲಿ ನಂಜಪ್ಪನಹಳ್ಳಿಗೆ ಹೋಗಬೇಕು ಎಂದು ಬಾಡಿಗೆಗೆ ಮಾಡಿಕೊಂಡು ಅಲ್ಲಿಂದ ಹೊರಟು ನಿರ್ಜನ ಪ್ರದೇಶಕ್ಕೆ ಆತನನ್ನು ಕರೆದುಕೊಂಡು ಹೋಗಿ ಹಗ್ಗದಿಂದ ಪ್ರಕಾಶನ ಕುತ್ತಿಗೆಗೆ ಬಿಗಿದು ಆತನನ್ನು ಕೊಲೆ ಮಾಡಿ ನಂತರ ಪ್ರಕಾಶನ ಆಟೋದಲ್ಲಿಯೇ ಆತನ ಶವವನ್ನು ಹೇಮಗಿರಿಯ ರಸ್ತೆಯಲ್ಲಿರುವ ದೇವಸ್ಥಾನದ ಹಿಂಭಾಗವಿದ್ದ ಕೆರೆಯ

ಏರಿಯ ಹತ್ತಿರ ತೆಗೆದುಕೊಂಡು ಹೋಗಿ ಕೆರೆಯ ಏರಿಯ ಕೆಳಗೆ ಹಾಕಿದ್ದಾಗಿ ನಮ್ಮ ಸಮಕ್ಷಮ ಮಾಹಿತಿ ನೀಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

44. ಸಾಕ್ಷಿಯು ಈ ದಿನ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ 1 ನೇ ಆರೋಪಿಯನ್ನು ತೋರಿಸಿ ಆತ ಆ ದಿನ ತಾನು ಧರಿಸಿದ್ದ ಕೆಂಪು ಬಣ್ಣದ ಕತ್ತಿನಲ್ಲಿ ಪಟ್ಟಿ ಇದ್ದಂತಹ ಒಂದು ಶರ್ಟನ್ನು ಮತ್ತು ನೀಲಿ ಬಣ್ಣದ ಒಂದು ಜರ್ಕಿನ್ ಅನ್ನು ಬಿಚ್ಚಿ ಅವುಗಳನ್ನು ತಾವು ಪ್ರಕಾಶನನ್ನು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿ ಪೊಲೀಸರಿಗೆ ಹಾಜರುಪಡಿಸಿದನು, ಸದರಿ ಬಟ್ಟೆಗಳನ್ನು ಪೊಲೀಸರು ಪ್ರತ್ಯೇಕ ಬಟ್ಟೆಗಳಲ್ಲಿ ಹಾಕಿ ಸುತ್ತಿ ಅರಳಿನಿಂದ ಸೀಲು ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು, ಆಗ ನಾನು ಮತ್ತು ಪ್ರಾಸಾ-6 ರವರು ಸಹಿ ಮಾಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

45. ನಂತರ 1 ನೇ ಆರೋಪಿ ತನ್ನ ಬಳಿ ಇದ್ದ ಒಂದು ವಿವೋ ಕಂಪನಿಗೆ ಸೇರಿದ ಮೊಬೈಲನ್ನು ಪೊಲೀಸರಿಗೆ ಹಾಜರುಪಡಿಸಿದನು, ಅದನ್ನು ಸಹ ಪೊಲೀಸರು ಮೇಲೆ ಹೇಳಿದಂತೆ ಸೀಲು ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು, ಸದರಿ ಮೊಬೈಲ್ ಏರೋಪ್ಲೇನ್ ಮೋಡಿನಲ್ಲಿ ಇತ್ತು, ನಂತರ ಪೊಲೀಸರು ಸದರಿ ಮೊಬೈಲನ್ನು 1 ನೇ ಆರೋಪಿಯಿಂದ ಏರೋಪ್ಲೇನ್ ಮೋಡಿನಿಂದ ತೆಗೆಸಿ ಆನ್ ಮಾಡಿಸಿದರು, ಸದರಿ ಮೊಬೈಲಿನಲ್ಲಿ ಏರ್ಟೆಲ್ ಕಂಪನಿಗೆ ಸೇರಿದ ಒಂದು ಸಿಮ್ ಇತ್ತು, ಸದರಿ ಸಿಮ್ ಅನ್ನು ಸಹ ಪೊಲೀಸರು ಮೊಬೈಲ್ ನೊಂದಿಗೆ ತಮ್ಮ ವಶಕ್ಕೆ ತೆಗೆದುಕೊಂಡರು, ಅದರ ಮೇಲೆ ನಾನು ಮತ್ತು ಪ್ರಾಸಾ-6 ಸಹಿ ಮಾಡಿದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

46. ಆ ದಿನ ನಾನು ಕಡೂರು ವೃತ್ತ ನಿರೀಕ್ಷಕರ ಕಛೇರಿಗೆ ಹೋದಾಗ ಸಮಯ ಬೆಳಗ್ಗೆ 8.30 ಗಂಟೆಯಾಗಿತ್ತು, ನಂತರ ಪೊಲೀಸರು ಮೇಲೆ ಹೇಳಿದ ಬಟ್ಟೆಗಳು ಮತ್ತು ಮೊಬೈಲನ್ನು ಬೆಳಗ್ಗೆ 9.00 ಗಂಟೆಯಿಂದ 9.30 ಗಂಟೆಯವರೆಗೆ ಮಹಜರು ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಮಹಜರಿಗೆ ನಾನು ಮತ್ತು ಫ್ರಾಸಾ-6 ರವರು ಸಹಿ ಮಾಡಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

47. ಸದರಿ ಮಹಜರು ಮುಗಿದ ಬಳಿಕ ಚಾಸಾ-14 ರವರು ವೃತ್ತ ನಿರೀಕ್ಷಕರ ಕಛೇರಿಗೆ ಬಂದರು, ನಂತರ ಆರೋಪಿತರು ತಾವು ಪ್ರಕಾಶನ ಆಟೋವನ್ನು ಬಾಡಿಗೆಗೆ ಮಾತನಾಡಿದ ಸ್ಥಳವನ್ನು ತೋರಿಸುವುದಾಗಿ ಹೇಳಿ ನನ್ನನ್ನು, ಚಾಸಾ-14 ರವರನ್ನು ಮತ್ತು ಪೊಲೀಸರನ್ನು ಬೆಂಗಳೂರು ಹೆದ್ದಾರಿ ಕಡೆ ಕರೆದುಕೊಂಡು ಹೋಗಿ ಅಲ್ಲಿ ಜೀಪನ್ನು ನಿಲ್ಲಿಸುವಂತೆ ಆರೋಪಿತರು ಹೇಳಿದರು, ಅದರಂತೆ ಜೀಪನ್ನು ನಿಲ್ಲಿಸಿದ ಮೇಲೆ ಆರೋಪಿತರು ನಮ್ಮನ್ನು ಕಡೂರಿನ ಬಸವೇಶ್ವರ ವೃತ್ತದ ಬಳಿ ಇರುವ ಶ್ರೀ ಮಾರ್ಟ್ ನ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಪ್ರಕಾಶನ ಆಟೋ ನಿಂತಿದ್ದಾಗಿ ಮತ್ತು ಅಲ್ಲಿ ಅವರು ಪ್ರಕಾಶನೊಂದಿಗೆ ಮಾತನಾಡಿ ಆತನ ಆಟೋವನ್ನು ಬಾಡಿಗೆಗೆ ಮಾಡಿಕೊಂಡಿದ್ದಾಗಿ ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

48. ನಾವು ಅಲ್ಲಿಗೆ ಹೋದಾಗ ಸಮಯ ಬೆಳಗ್ಗೆ 10.00 ಗಂಟೆಯಾಗಿತ್ತು, ಸದರಿ ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 10.00 ಗಂಟೆಯಿಂದ 10.30 ಗಂಟೆಯವರೆಗೆ ಮಹಜರು ಜರುಗಿಸಿದರು, ಸದರಿ ಮಹಜರಿಗೆ ನಾನು ಮತ್ತು ಫ್ರಾಸಾ-6 ರವರು ಸಹಿ ಮಾಡಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

49. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ, ಸದರಿ ದಾಖಲೆಗಳು ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು ಮತ್ತು ನಿಪಿ.20 ಪಂಚನಾಮೆಯನ್ನು ಜರುಗಿಸಿದ ಸ್ಥಳದಲ್ಲಿ ತಯಾಗಿಸಲಾಗಿದೆ, ಆ ಸಮಯದಲ್ಲಿ 2 ನೇ ಆರೋಪಿ ಜೀಪಿನಲ್ಲಿಯೇ ಕುಳಿತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

50. ನಂತರ ಆರೋಪಿತರು ತಾನು ಪ್ರಕಾಶನನ್ನು ಕೊಲೆ ಮಾಡಿರುವ ಸ್ಥಳವನ್ನು ತೋರಿಸುವುದಾಗಿ ನುಡಿದು ನನ್ನನ್ನು, ಚಾಸಾ-14 ರವರನ್ನು ಮತ್ತು ಪೊಲೀಸರನ್ನು ಅಲ್ಲಿಂದ ಬೆಂಗಳೂರು ಹೆದ್ದಾರಿಯಲ್ಲಿ ಮುಂದೆ ಹೋಗಿ ಕಡೂರಿನ ತಿಮ್ಮಾಪುರ ಗೇಟಿನ ಹತ್ತಿರ ಜೀಪನ್ನು ನಿಲ್ಲಿಸುವಂತೆ ಹೇಳಿದರು, ಅದರಂತೆ ಜೀಪನ್ನು ನಿಲ್ಲಿಸಿದಾಗ ಆರೋಪಿತರು ತಿಮ್ಮಾಪುರ ಗೇಟಿನಿಂದ ಸುಮಾರು 50 ಮೀ. ಒಳಗೆ ನಮ್ಮನ್ನು ಕರೆದುಕೊಂಡು ಹೋದರು, ಅಲ್ಲಿ ಖಾಲಿ ನಿವೇಶನಗಳು ಮತ್ತು ಅಕ್ಕ-ಪಕ್ಕದಲ್ಲಿ ಡ್ರೈನೇಜ್ ಗಳು ಮತ್ತು ಅರ್ಧಂಬರ್ಧ ಮನೆಗಳನ್ನು ಕಟ್ಟಿರುವುದು ಕಂಡುಬಂತು, ಅಲ್ಲಿ ಆರೋಪಿತರು ನಮಗೆ ಸ್ಥಳವನ್ನು ತೋರಿಸಿ ಅಲ್ಲಿ ಅವರು ಪ್ರಕಾಶನ ಕುತ್ತಿಗೆಯನ್ನು ಹಗ್ಗದಿಂದ ಬಿಗಿದು ಕೊಲೆ ಮಾಡಿರುವುದಾಗಿ ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

51. ಅಲ್ಲಿಂದ ಸುಮಾರು 50 ಮಿ. ದೂರದಲ್ಲಿದ್ದ ಬಿದ್ದಿದ್ದ ಒಂದು ಪ್ಲಾಸ್ಟಿಕ್ ಹಗ್ಗವನ್ನು 1 ನೇ ಆರೋಪಿ ತಂದು ಪೊಲೀಸರಿಗೆ ಹಾಜರುಪಡಿಸಿ ಸದರಿ ಹಗ್ಗದಿಂದಲೇ ತಾನು ಮತ್ತು 2 ನೇ ಆರೋಪಿ ಪ್ರಕಾಶನ ಕುತ್ತಿಗೆಯನ್ನು ಬಿಗಿದು ಕೊಲೆ ಮಾಡಿದ್ದಾಗಿ ತಿಳಿಸಿದನು, ಸದರಿ ಹಗ್ಗ ಕಿರುಬೆರಳು ಗಾತ್ರದ ಪ್ಲಾಸ್ಟಿಕ್ ಹಗ್ಗವಾಗಿತ್ತು ಮತ್ತು ಅದರಲ್ಲಿ ಎರಡು ಕಡೆಗಳಲ್ಲಿ ಗಂಟುಗಳಿದ್ದವು, ಸದರಿ ಹಗ್ಗವನ್ನು

ಪೊಲೀಸರು ಪ್ಯಾಕ್ ಮಾಡಿಕೊಂಡು ಸೀಲು ಮಾಡಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದುಕೊಂಡರು, ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಬೆಳಗ್ಗೆ 10.45 ಗಂಟೆಯಿಂದ 11.00 ಗಂಟೆಯವರೆಗೆ ಮಹಜರನ್ನು ಜರುಗಿಸಿದರು, ಅದಕ್ಕೆ ನಾನು ಮತ್ತು ಚಾಸಾ-14 ರವರು ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

52. ನಂತರ 1 ಮತ್ತು 2 ನೇ ಆರೋಪಿತರು ಪ್ರಕಾಶನನ್ನು ಕೊಲೆ ಮಾಡಿದ ಬಳಿಕ ಆತನ ಶವವನ್ನು ಪ್ರಕಾಶನ ಆಟೋದಲ್ಲಿಯೇ ತೆಗೆದುಕೊಂಡು ಹೋಗಿ ಹೇಮಗಿರಿಯ ಕೆರೆಯ ಏರಿ ಹಿಂಭಾಗದಲ್ಲಿ ಎಸೆದಿದ್ದಾಗಿ ತಿಳಿಸಿ, ಸದರಿ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಾವು ಪ್ರಕಾಶನ ಶವವನ್ನು ಎಸೆದಿದ್ದಾಗಿ ತಿಳಿಸಿದರು. ಸದರಿ ಸ್ಥಳ ಕೆರೆಯ ಏರಿಯ ಕೆಳಭಾಗವಾಗಿತ್ತು, ಪೊಲೀಸರು ಆರೋಪಿತರನ್ನು ಕುರಿತು ಮೃತನ ಬಟ್ಟೆ ಮತ್ತು ಮೊಬೈಲನ್ನು ಏನು ಮಾಡಿದಿರಿ ಎಂದು ಕೇಳಿದರು, ಆಗ ಆರೋಪಿತರು ಅವುಗಳನ್ನು ಕೆರೆಯ ಒಳಗೆ ಹಾಕಿದ್ದಾಗಿ ತಿಳಿಸಿ, ಸ್ಥಳವನ್ನು ತೋರಿಸಿದರು, ಪೊಲೀಸರು ಅಲ್ಲಿಗೆ ಹೋಗಿ ಹುಡುಕಾಡಿದರು ಅವು ಸಿಗಲಿಲ್ಲ. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12.15 ರಿಂದ 1.15 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ ನಾನು, ಮತ್ತು ಚಾಸಾ-14- ಹನುಮಂತಪ್ಪರವರು ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

53. ನಂತರ ಪೊಲೀಸರು 1 ನೇ ಆರೋಪಿಯನ್ನು ಕುರಿತು ಮೃತ ಪ್ರಕಾಶನ ಆಟೋವನ್ನು ಏನು ಮಾಡಿದಿರಿ ಎಂದು ಕೇಳಿದರು, ಆಗ ಆತ ಸದರಿ ಆಟೋವನ್ನು ಚಿಕ್ಕಮಗಳೂರಿನಲ್ಲಿ ನಿಲ್ಲಿಸಿರುವುದಾಗಿ ಹೇಳಿ, ನಮ್ಮನ್ನು ಮತು ಪೊಲೀಸರನ್ನು ಅಲ್ಲಿಂದ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಕರೆದುಕೊಂಡು ಅಂಚೆ ಸೋಮನಹಳ್ಳಿ-ಸಖರಾಯಪಟ್ಟಣ ಮಾರ್ಗವಾಗಿ

ಚಿಕ್ಕಮಗಳೂರಿಗೆ ಕರೆದುಕೊಂಡು ಬಂದು ಟೆಂಡರ್ ಚಿಕನ್ ಹಿಂಭಾಗದಲ್ಲಿ ಲಾರಿಗಳನ್ನು ನಿಲ್ಲಿಸುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಲಾರಿಗಳ ಹಿಂಭಾಗದಲ್ಲಿ ನಿಲ್ಲಿಸಿದ್ದ ಆಟೋವನ್ನು ತೋರಿಸಿ ಅದು ಮೃತ ಪ್ರಕಾಶನ ಆಟೋ ಎಂದು 1 ನೇ ಆರೋಪಿ ತಿಳಿಸಿದನು, ಪ್ರಕಾಶನನ್ನು ಕೊಲೆ ಮಾಡಿ ಆತನ ಆಟೋವನ್ನು ಮಾರಾಟ ಮಾಡುವ ಉದ್ದೇಶದಿಂದ ಅದನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದಾಗಿ ಆರೋಪಿತರು ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

54. ಸದರಿ ಆಟೋದ ಹಿಂಭಾಗದಲ್ಲಿ "ಶ್ರೀ ಜೇನುಕಲ್ " ಎಂದು ಬರೆದಿತ್ತು, ಸದರಿ ಆಟೋದ ನೊಂದಣಿ ಸಂ. ಕೆಎ-66/586 ಆಗಿರುತ್ತದೆ, ಸದರಿ ಆಟೋ ಪ್ರಕಾಶನಿಗೆ ಸೇರಿದ್ದಾಗಿರುತ್ತದೆ, ಸದರಿ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 2.30 ಗಂಟೆಯಿಂದ 3.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ ನಾನು ಮತ್ತು ಚಾಸಾ-14-ಹನುಮಂತಪ್ಪರವರು ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

55. ನಂತರ ಪೊಲೀಸರು 1 ನೇ ಆರೋಪಿಯನ್ನು ಕುರಿತು ಆಟೋಗೆ ಎಲ್ಲಿ ಡೀಜೆಲನ್ನು ಹಾಕಿಸಿಕೊಂಡಿರಿ ಎಂದು ಕೇಳಿದರು, ಆಗ 1 ನೇ ಆರೋಪಿ ತಾವು ಆಟೋಗೆ ಡೀಜೆಲನ್ನು ಹಾಕಿಸಿಕೊಂಡ ಪೆಟ್ರೋಲ್ ಬಂಕನ್ನು ತೋರಿಸುವುದಾಗಿ ಹೇಳಿ, ಅಲ್ಲಿಂದ ಮಧ್ಯಾಹ್ನ 3.00 ಗಂಟೆಗೆ ನಮ್ಮನ್ನು ಕರೆದುಕೊಂಡು ಕಡೂರಿಗೆ ಹೋಗಿ, ಕಡೂರು-ಬೆಂಗಳೂರು ಹೆದ್ದಾರಿಯಲ್ಲಿರುವ ಹಳೇ ಅಗ್ನಿಶಾಮಕ ಠಾಣೆಯ ಪಕ್ಕದಲ್ಲಿ ಇದ್ದ ಎಂ.ಎಸ್. ಪೆಟ್ರೋಲ್ ಬಂಕ್ ಗೆ ಕರೆದುಕೊಂಡು ಹೋಗಿ, ಅಲ್ಲಿಗೆ ದಿನಾಂಕಃ 14-07-2021 ರಂದು ರಾತ್ರಿ 9.00 ಗಂಟೆಗೆ ಪ್ರಕಾಶನ ಆಟೋದಲ್ಲಿ ಪ್ರಕಾಶ, ತಾನು, ಮತ್ತು 2 ನೇ ಆರೋಪಿ ಹೋಗಿ ಡೀಜೆಲ್ ಹಾಕಿಸಿಕೊಂಡಿದ್ದಾಗಿ ತಿಳಿಸಿ, ಸ್ಥಳವನ್ನು ತೋರಿಸಿರುತ್ತಾನೆ, ಪೊಲೀಸರು ಸದರಿ ಸ್ಥಳವನ್ನು ಪರಿಶೀಲಿಸಿದಾಗ, ಪೆಟ್ರೋಲ್ ಬಂಕ್‌ನ 4 ಕಡೆಗಳಲ್ಲಿ ಸಿಸಿಕ್ಯಾಮರಾವನ್ನು

ಅಳವಡಿಸಿರುವುದು ಕಂಡು ಬಂದಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

56. ನಂತರ ಪೊಲೀಸರು, ನಾವು ಮತ್ತು ಆರೋಪಿತರು ಸದರಿ ಪೆಟ್ರೋಲ್ ಬಂಕಿನ ಕಛೇರಿಗೆ ಹೋದೆವು, ಅಲ್ಲಿ ಸದರಿ ಬಂಕಿನ ಮಾಲೀಕರಾದ ಶಿವಕುಮಾರ್ ರವರು ಇದ್ದರು, ಪೊಲೀಸರು ಸದರಿ ಶಿವಕುಮಾರ್ ರವರನ್ನು ಕುರಿತು ತಮ್ಮ ಪೆಟ್ರೋಲ್ ಬಂಕಿನ ದಿನಾಂಕಃ 14-07-2021 ರ ರಾತ್ರಿ 9.00 ಗಂಟೆಯ ನಂತರದ ಸಿಸಿ ಕ್ಯಾಮಾರಾ ಫೂಟೇಜನ್ನು ನೀಡುವಂತೆ ಕೇಳಿದರು, ಆಗ ಶಿವಕುಮಾರ್ ರವರು ದಿನಾಂಕಃ 14-07-2021 ರ ಸಿಸಿ ಕ್ಯಾಮರಾ ಫೂಟೇಜನ್ನು ನನ್ನ, ಚಾಸಾ-14 ಮತ್ತು ಆರೋಪಿತರ ಸಮಕ್ಷಮ ಪೊಲೀಸರಿಗೆ ತೋರಿಸಿದರು, ಅದನ್ನು ಪೊಲೀಸರು ಚೆಕ್ ಮಾಡಿದಾಗ ರಾತ್ರಿ 9 ಗಂಟೆ 48 ನಿಮಿಷಕ್ಕೆ ಪ್ರಕಾಶನ ಆಟೋ ಸದರಿ ಪೆಟ್ರೋಲ್ ಬಂಕಿಗೆ ಬಂದಿರುವುದು, 1 ನೇ ಆರೋಪಿ ಸದರಿ ಆಟೋದ ಚಾಲಕನ ಹಿಂಭಾಗದ ಸೀಟಿನಿಂದ ಕೆಳಗೆ ಇಳಿದು ಬಂದಿರುವುದು, ಸದರಿ ಆಟೋದ ಚಾಲಕನ ಸೀಟಿನಲ್ಲಿ ಪ್ರಕಾಶ್ ಕುಳಿತಿರುವುದು ಮತ್ತು 2 ನೇ ಆರೋಪಿ ಆಟೋದ ಚಾಲಕನ ಹಿಂಭಾಗದ ಸೀಟಿನಲ್ಲಿ ಕುಳಿತಿರುವುದು ಕಂಡು ಬಂದಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

57. ನಂತರ ಆಟೋಗೆ ಡೀಜೆಲ್ ಹಾಕಿಸಿಕೊಂಡ ಬಳಿಕ 1 ನೇ ಆರೋಪಿ ಪೆಟ್ರೋಲ್ ಬಂಕಿನವರಿಗೆ ದುಡ್ಡನ್ನು ಕೊಡುತ್ತಿರುವುದು ಮತ್ತು ರಾತ್ರಿ 9.53 ಗಂಟೆಗೆ ಅವರು ಆಟೋದಲ್ಲಿ ಕುಳಿತು ವಾಪಾಸು ಹೋಗುತ್ತಿರುವುದು ಕಂಡು ಬಂದಿತು, ಸದರಿ ಸಿಸಿ ಕ್ಯಾಮರಾ ಫೂಟೇಜ್ ನಲ್ಲಿ ಕಂಡು ಬಂದ ವ್ಯಕ್ತಿಗಳು ಆ ದಿನ ನಮ್ಮೊಂದಿಗೆ ಮಹಜರ್ ಗೆ ಬಂದಿದ್ದ ಆರೋಪಿತರು ಎಂದು ನಾವು ಖಾತ್ರಿಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

58. ನಂತರ ಶಿವಕುಮಾರ್ ರವರು ಒಂದು ಖಾಲಿ ಡಿವಿಡಿಯನ್ನು ತೆಗೆದು ತಮ್ಮ ಡಿವಿ ಆರ್ ಬಾಕ್ಸಿನಲ್ಲಿದ್ದ ಸಿಸಿ ಕ್ಯಾಮರಾ ಫೂಟೇಜನ್ನು ಸದರಿ ಡಿವಿಡಿಗೆ ವರ್ಗಾಯಿಸಿ ಅದನ್ನು ಪೊಲೀಸರಿಗೆ ಕೊಟ್ಟರು, ಆ ಬಗ್ಗೆ ಪೊಲೀಸರು ಸಂಜೆ 4.00 ರಿಂದ 5.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದುಕೊಂಡರು, ಅದಕ್ಕೆ ನಾನು, ಮತ್ತು ಚಾಸಾ-14-ಹನುಮಂತಪ್ಪರವರು ಸಹಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ